ಸ್ವೆಟರ್ ಧರಿಸಿ ಬಂದಿದ್ದರಿಂದ ಚಳಿಯ ಅನುಭವ ಅಷ್ಟಾಗಿ ಆಗಲಿಲ್ಲ.

ಮಾತೇ ಬೇಕಿರದ ಈ ದಿವ್ಯ ಮೌನದಲ್ಲಿ ಕೆರೆದಂಡೆಯನ್ನು ತಲುಪಿದುದೇ ತಿಳಿಯಲಿಲ್ಲ. ಕೆರೆದಂಡೆಯಲ್ಲಿ ಮತ್ತೊಂದು ಮಾಂತ್ರಿಕ ದೃಶ್ಯ ಅನಾವರಣ ಗೊಂಡಿತ್ತು. ಈಗಷ್ಟೇ ಮಬ್ಬು ಹರಿಯುತ್ತಿತ್ತು. ಬಾಲರವಿ ಮೋಡಗಳ ನಡುವೆ ತನ್ನ ಹೊಂಗಿರಣವನ್ನು ಹೊರಸೂಸುತ್ತಿದ್ದ ದೃಶ್ಯ ಮನಮೋಹಕವಾಗಿತ್ತು. ಕೆರೆಯ ಸ್ವಚ್ಛ ನೀರು ಬಂಗಾರದ ಬಣ್ಣದಿಂದ ಫಳಫಳನೆ ಹೊಳೆಯುತ್ತಿತ್ತು. ನಾನಾ ಜಾತಿಯ ನೀರಹಕ್ಕಿಗಳು ಕಲರವವನ್ನೆಬ್ಬಿಸುತ್ತಿದ್ದವು. ಕೆರೆಯ ಸುತ್ತಲಿನ ದೊಡ್ಡ ದೊಡ್ಡ ಬಂಡೆಗಳಿಂದ ಆ ಪರಿಸರ ಸೃಷ್ಟಿಕರ್ತನ ಅತ್ಯುತ್ತಮ ಕಲಾಕೃತಿಯಂತೆ ಕಂಗೊಳಿಸತೊಡಗಿತ್ತು. ಅಲ್ಲೇ ಹಾಕಿದ್ದ ಕಲ್ಲಿನ ಬೆಂಚೊಂದರಲ್ಲಿ ಮೂವರೂ ಕುಳಿತು ವಿಶ್ರಮಿಸಿದರು.

'ರಮ್ಯ, ಹೇಗಿದೆಯಮ್ಮಾ, ನಮ್ಮೂರಿನ ಪರಿಸರ?'ಪುರುಷೋತ್ತಮರು ರಮ್ಯಾಳನ್ನು ಮಾತಿಗೆಳೆದರು. ಋತುವನ್ನು ನಂದಿಗೆ ಕರೆದೊಯ್ಯುವುದರ ಬಗ್ಗೆ ಪ್ರಸ್ತಾಪಿಸಲು ಇದೇ ಸರಿಯಾದ ಸಮಯವೆನಿಸಿತು ರಮ್ಯಾಳಿಗೆ.

'ತುಂಬಾ ಚೆನ್ನಾಗಿದೆ ಅಂಕಲ್, ಮನುಷ್ಯ ಪ್ರಕೃತಿಯನ್ನು ಕಾಪಾಡಿದ್ರೆ ಮನಸ್ಸಿಗೆ ಎಷ್ಟು ಸುಖ, ಸಂತೋಷ ಸಿಗುತ್ತೆ ಅಲ್ವಾ, ಈ ಸುಖ, ಸಂತೋಷದ ಮುಂದೆ ಎಷ್ಟು ಕೋಟಿ ಹಣವನ್ನಿಟ್ಟರೂ ಅದು ಬರಿಯ ಸೊನ್ನೆ ಅಷ್ಟೇ....ಅಂದ ಹಾಗೆ ಅಂಕಲ್, ನಾಳೆ ನಮ್ಮೂರಿಗೆ ಹೋಗೋಣ ಅಂತಿದ್ದೀನಿ, ಅಪ್ಪಾಜಿ ಕರೀತಾನೇ ಇದ್ದಾರೆ...' ಮೆಲ್ಲನೆ ಪೀಠಿಕೆ ತೆಗೆದಳು ರಮ್ಯ.

'ಹೌದಾ ರಮ್ಯ, ಈಗ್ಲೇ ಹೊರಡಲು ಏನವಸರ? ಇನ್ನೂ ನಾಲ್ಕು ದಿನ ಇಲ್ಲೇ ಇದ್ದಿದ್ರೆ ನಮ್ಮ ಋತುವಿಗೆ ಜೊತೆಯಾಗ್ತಿತ್ತು...' ಎಂದ ಪುರುಷೋತ್ತಮರು ಮಗಳತ್ತ ನೋಡಿದರು. ಅವಳ ದೃಷ್ಟಿ ಕೆರೆಯಲ್ಲಿ ಆಟವಾಡುತ್ತಿದ್ದ ಜೋಡಿ ಕೊಕ್ಕರೆಗಳತ್ತ ನೆಟ್ಟಿತ್ತು. 'ನಾನು ಹೋಗ್ಲೇಬೇಕು ಅಂಕಲ್, ಇಲ್ಲಾಂದ್ರೆ ಅಪ್ಪಾಜಿ ಬೇಜಾರು ಮಾಡಿಕೊಳ್ತಾರೆ, ನನ್ನ ಜೊತೆ ಋತುವನ್ನೂ ಕಳಿಸಿ ಕೊಡ್ತೀರಾ ಅಂಕಲ್, ನಾಲ್ಕು ದಿನ ಅವಳು ಅವಳು ಅಲ್ಲಿದ್ದು ಬಂದ್ರೆ ಅವಳ ಮನಸ್ಸೂ ತಿಳಿಯಾಗುತ್ತೆ...' ರಮ್ಯಾಳೆಂದಾಗ ಪುರುಷೋತ್ತಮರು ಚಕಿತರಾಗಿ ಅವಳತ್ತ ನೋಡಿದರು. ಋತುವಿನ ಮನಸ್ಸು ತಿಳಿಯಾಗುತ್ತೆ ಎಂದರೆ....ಅವಳು ಮನಸ್ಸನ್ನು ಕೆಡಿಸಿಕೊಂಡಿದ್ದಾಳೆಯೇ? ಹೆಚ್ಚಿನ ಸಮಯವನ್ನು ಬಂಗಲೆಯ ಹೊರಗೇ ಕಳೆಯುವುದರಿಂದ ಅವರು ಇಲ್ಲಿನ ಯಾವ ವಿಷಯವನ್ನೂ ಅಷ್ಟಾಗಿ ಗಮನಿಸುವುದಿಲ್ಲ.

'ಎನಿ ಪ್ರಾಬ್ಲಂ ಋತು, ನಿಂಗೆ ಬಂಗ್ಲೆಯಲ್ಲಿ ಬೇಸರವಾಗ್ತಿದೆಯಾ?....ಯಾಕೆ ಮಗು ನನ್ನ ಹತ್ರ ಹೇಳಬಾರದಾ....?' ಪಕ್ಕದಲ್ಲೇ ಕುಳಿತಿದ್ದ ಋತುವಿನ ಕೈ ಹಿಡಿದುಕೊಂಡು ಕೇಳಿದಾಗ ಅವಳು ಉತ್ತರಿಸಲೇಬೇಕಿತ್ತು. ಜೋಡಿ ಕೊಕ್ಕರೆಗಳಿಂದ ದೃಷ್ಟಿಯನ್ನು ತಂದೆಯತ್ತ ತಿರುಗಿಸಿದಳು.

'ಪಪ್ಪ ಏನಂತ ಹೇಳ್ಲಿ, ನಿಮ್ಗೂ ಗೊತ್ತಿರೋದೇ ಅಲ್ವಾ, ಮೊದ್ಲು ನನ್ನ ಜೊತೆ ಅಷ್ಟು ಆತ್ಮೀಯಳಾಗಿದ್ದ ಚಿಕ್ಕಮ್ಮ ಈಗ ನನ್ನ ಹತ್ರ ಸರಿಯಾಗಿ ಮಾತೂ ಆಡಲ್ಲ, ಹೇಮಂತನನ್ನು ನಾನು ಮರೆಯಬೇಕಂತೆ, ಅದು ನನ್ನಿಂದ ಸಾಧ್ಯವೇ ಪಪ್ಪ, ನಿಮ್ಗೂ ಗೊತ್ತಲ್ಲ..' ಕಣ್ತುಂಬಿಕೊಂಡಳು ಋತು.

ಮಗಳ ಅಳುಮುಖವನ್ನು ನೋಡಿ ಪುರುಷೋತ್ತಮರಿಗೂ ಬೇಸರವಾಯಿತು. ತಾಯಿಯನ್ನು ಕಳೆದುಕೊಂಡ ಹುಡುಗಿ, ಅವಳು ಯಾವುದಕ್ಕೂ ಕೊರಗಬಾರದು, ಕಣ್ಣೀರು ಹಾಕಬಾರದು.

'ಋತು, ನೀನು ಲೆಕ್ಚರರ್ ಆಗಿರೋಳು, ಹೀಗೆ ಸಣ್ಣ ಮಗುವಿನಂತೆ ಎಲ್ಲದಕ್ಕೂ ಫೀಲ್ ಮಾಡ್ತಿಯಲ್ಲ, ಚಿಕ್ಕಮ್ಮನ ವಿಷ್ಯ ನಿಂಗೊತ್ತಿಲ್ವಾ? ಅವ್ಳು ಅಷ್ಟೊಂದು ಓದಿದವಳಲ್ಲ, ಜೊತೆಗೆ ಮೂಢನಂಬಿಕೆಯೂ ಸ್ವಲ್ಪ ಜಾಸ್ತಿಯೇ, ಹೇಮಂತ ಈ ಬಂಗಲೆಗೆ ಬರಲು ಆರಂಭಿಸಿದ ಮೇಲೆ ನಡೆಯುತ್ತಿರುವ ಘಟನೆಗಳು ಅವಳನ್ನು ಘಾಸಿಗೊಳಿಸಿವೆ, ಅಫ್ ಕೋರ್ಸ್ ಅವನು ಬಂದಿರದಿದ್ರೂ ಈ ಎಲ್ಲಾ ಘಟನೆಗಳೂ ಖಂಡಿತಾ ನಡೆದಿರ್ತಿದ್ವು, ಆದ್ರೆ ನಿನ್ನ ಚಿಕ್ಕಮ್ಮ ಹೇಮಂತನಿಗೂ, ಈ ಘಟನೆಗಳಿಗೂ ಸಂಬಂಧ ಕಲ್ಪಿಸ್ತಿದ್ದಾಳೆ, ಸದಾ ಈ ಬಂಗಲೆಯ ಬಗ್ಗೆ, ಇಲ್ಲಿನ ಜನರ ಯೋಗಕ್ಷೇಮದ ಬಗ್ಗೆ ಯೋಚಿಸುವ ಜೀವ ಅದು, ಅವಳ ಬಗ್ಗೆ ನೀನೇನೂ ತಲೆಕೆಡಿಸಿಕೊಳ್ಬೇಡ, ನಾನು ಬುದ್ಧಿ ಹೇಳ್ತೀನಿ ಬಿಡು, ನಿಂಗೆ ರಮ್ಯಾಳ ಜೊತೆ ಅವರೂರಿಗೆ ಹೋಗಿ ಬರುವ ಆಸೆ ಇದ್ರೆ ನಾಲ್ಕು ದಿನ ಹೋಗಿದ್ದು ಬಾ....' ಎಂದ ಪುರುಷೋತ್ತಮರು ಮಗಳನ್ನು ಹೆಗಲಿಗೊರಗಿಸಿಕೊಂಡಾಗ ಋತುವಿನೊಂದಿಗೆ ರಮ್ಯಾಳ ಕಂಗಳೂ ತೇವಗೊಂಡವು. ತಂದೆ, ತಾಯಿ ಎರಡೂ ಆಗಿ ಮಗಳನ್ನು ಬೆಳೆಸಿದ ಅವರ ಅಂತಃಕರಣ ದೊಡ್ಡದೆನಿಸಿತು.

ಸ್ವಲ್ಪ ಹೊತ್ತು ಕೆರೆದಂಡೆಯಲ್ಲಿದ್ದು ಅಲ್ಲಿನ ಸೌಂದರ್ಯವನ್ನು ಮನಸಾರೆ ಸವಿದು ಬಂಗಲೆಗೆ ಹಿಂದಿರುಗಿದರು.

## ನಂದಿಯತ್ತ ಪಯಣ

ಮರುದಿನ ಬೆಳಿಗ್ಗೆ ನಂದಿಗೆ ಹೊರಡಲು ತಿಳಿದ ಟ್ಯಾಕ್ಸಿಯೊಂದನ್ನು ಗೊತ್ತು ಮಾಡುವುದಾಗಿ ಪುರುಷೋತ್ತಮರು ಹೇಳಿದರು.

'ಪಪ್ಪ, ಟ್ಯಾಕ್ಸಿ ಯಾಕೆ? ನನ್ನ ಕಾರನ್ನೇ ತೊಗೊಂಡು ಹೋಗ್ತೀನಿ..' ಋತುವೆಂದಾಗ

'ಬೇಡ ಋತು, ಈಗ್ಲೇ ನಿನ್ಯಾರೋ ಫಾಲೋ ಮಾಡ್ತಿದ್ದಾರೆ ಅಂತ ಹೇಳ್ತಿದ್ದಿ, ಸಿಟಿಯೊಳಗಾದ್ರೆ ಅಂಥ ಆತಂಕವಿರಲ್ಲ, ಬೇರೆ ಊರಿಗೆ ಹೋಗ್ತಿದ್ದಿ, ನಿನ್ನ ಜಾಗ್ರತೆಯಲ್ಲಿ ನೀನಿರೋದು ಒಳ್ಳೆಯದಲ್ವಾ, ಟ್ಯಾಕ್ಸಿಯಲ್ಲಿ ಹೋಗೋದೇ ಒಳ್ಳೆಯದು ಅನ್ಸುತ್ತೆ....' ಪುರುಷೋತ್ತಮರ ಮಾತಿಗೆ ಋತು ಒಪ್ಪಿದಳು. ಹೇಗೋ ತಂದೆ ತನ್ನನ್ನು ನಂದಿಗೆ ಕಳುಹಿಸಲು ಒಪ್ಪಿರುವುದೇ ದೊಡ್ಡ ವಿಷಯವೆನಿಸಿತು.

ಕಲಾವತಿ ಮಾಡಿಕೊಟ್ಟ ಬಿಸಿ ಕಾಫಿ ಕುಡಿದು ಗೆಳತಿಯರು ಮಹಡಿಯೇರಿದರೆ ಪುರುಷೋತ್ತಮರು ಸ್ನಾನ ಇತ್ಯಾದಿ ಮುಗಿಸಲು ಅಣಿಯಾಗತೊಡಗಿದರು. ಸಂಜೆಯವರೆಗೂ ಕಲಾವತಿ ಮುಖ ಬಿಗಿದುಕೊಂಡೇ ಇದ್ದರು. ಸಂಜೆ ಗೆಳತಿಯರಿಬ್ಬರೂ ಬಂಗಲೆಯ ಆವರಣದಲ್ಲಿ ಸಾಕಷ್ಟು ಅಡ್ಡಾಡಿದರು. ಕಾರಂಜಿ ತೋಟದಲ್ಲಿ ಕುಳಿತಿದ್ದ ಭರತನನ್ನೂ ಕೀಟಲೆ ಮಾಡಿದರು. ಆದರೆ ಅವನು ಬಾಯ್ತೆರೆಯಲಿಲ್ಲ. ದೂರದಲ್ಲಿ ಕಲಾವತಿ ವಾಕಿಂಗ್ ಮಾಡುತ್ತಿರುವುದು ಕಂಡಿತು.

'ರಮ್ಯ, ಅದಕ್ಕೆ ನಾನು ಈ ಕೋಟೆ ಬಂಗ್ಲೆಗೆ 'ಮೌನಮಂಟಪ' ಅಂತ ಇನ್ನೊಂದು ಹೆಸರನ್ನು ನಾಮಕರಣ ಮಾಡಿದ್ದೀನಿ, ಮೊದ್ಲು ಸುಂದರಿ, ನಂತರ ಭರತ, ಈಗ ಚಿಕ್ಕಮ್ಮ ಮೌನಮಂಟಪದ ಮೆಂಬರ್ಸ್ ಆಗಿದ್ದಾರೆ ನೋಡು, ಇನ್ನು ನಾನು ಪಪ್ಪ ಯಾವಾಗ ಅಲ್ಲಿಗೆ ಜಾಯ್ನ್ ಆಗ್ತೀವೋ....'

ಋತು ತಮಾಷೆಯಾಗಿ ಮಾತನಾಡಿದರೂ ಅದರಲ್ಲಿರುವ ನೋವಿನೆಳೆಯನ್ನು ಗುರುತಿಸಿದಳು ರಮ್ಯ. ಬೀಸುತ್ತಿರುವ ತಂಗಾಳಿಗೆ ತನ್ನ ಅಲೆ ಅಲೆಯಾದ ತಲೆಗೂದಲನ್ನು ಹಿಂದೆ ಸರಿಸುತ್ತಾ, ಹಸಿರು ಕುರ್ತಾವೊಂದನ್ನು ಧರಿಸಿಕೊಂಡು ಚಳಿಗಾಳಿಗೆ ಮುಖವೊಡ್ಡಿದ್ದ ಗೆಳತಿ ಪುಟ್ಟ ಮಗುವಿನಂತೆ ಕಂಡಳು ರಮ್ಯಳಿಗೆ. ತಮ್ಮಿಬ್ಬರ ನಡುವೆ ಎಷ್ಟೊಂದು ಭಿನ್ನತೆಯಿದೆ! ತಾನು ಉದ್ದ ಜಡೆಯನ್ನು ಹಾಕಿಕೊಂಡು, ಚೂಡಿದಾರ್ ಧರಿಸಿ ಓಡಾಡುವ ಸಾದಾ ಸೀದಾ ಹುಡುಗಿ. ಆದರೆ ಋತು ಹಾಗಲ್ಲ. ಜೀನ್ಸಿನೊಟ್ಟಿಗೆ ಎಲ್ಲ ಬಗೆಯ ಉಡುಪುಗಳನ್ನು ಧರಿಸುವ ಆಧುನಿಕ ಯುವತಿ. ಕೋಟೆ ಬಂಗಲೆಯ ಶ್ರೀಮಂತ ಆರೈಕೆಯಲ್ಲಿ ಮುದ್ದಾಗಿ ಬೆಳೆದವಳಾದರೂ ಸರಳ ಸುಂದರಿ. ಅವಳ ಈ ಸರಳತೆಯೇ ತಮ್ಮಿಬ್ಬರನ್ನು ಸ್ನೇಹದಲ್ಲಿ ಬೆಸೆದಿದೆ....

'ಋತು, ನಾನವತ್ತೇ ನಿಂಗೆ ಹೇಳಿದ್ದೀನಿ, ಯಾವ್ದನ್ನೂ ತುಂಬಾ ಹಚ್ಚಿಕೊಳ್ಬೇಡ, ಎಲ್ಲಾ ಸರಿಯಾಗುತ್ತೆ, ಮೊದ್ಲು ಶಾಂತವಾಗಿರೋದನ್ನು ಕಲಿ, ಅರ್ಧದಷ್ಟು ಸಮಸ್ಯೆಗಳು ಆಗ್ಲೇ ಪರಿಹಾರವಾಗುತ್ತೆ...' ಎಂದು ಗೆಳತಿಯ ಕೈಯನ್ನು ಹಿಡಿದಳು ರಮ್ಯ.

ಇಬ್ಬರೂ ಒಂದಷ್ಟು ಹೊತ್ತು ಅಡ್ಡಾಡಿ ಬಂಗಲೆಯೊಳಕ್ಕೆ ಬಂದರು. ಇನ್ನೂ ಕಲಾವತಿ ವಾಕಿಂಗ್ ಮುಗಿಸಿ ಒಳ ಬಂದಿರಲಿಲ್ಲ. ಸುಂದರಿ ತನ್ನ ಮನೆಗೆ ಹೊರಟು ಹೋಗಿದ್ದಳು.ಗೆಳತಿಯರಿಬ್ಬರೂ ಟೀ ಮಾಡಿಕೊಂಡು ಕುಡಿದು

### ಆಸ್ತಿ

ನಲ್ಲೆ
ನನ್ನ ಕವನಗಳೇ ನನ್ನ ಆಸ್ತಿ
ನೀ ಮೆಚ್ಚಿ ಹೊಗಳಿದರೆ
ಬರೆದು ಬಿಡುವೆ
ಇನ್ನೆರಡು ಕವನಗಳ
ಜಾಸ್ತಿ!

★ ಆರ್. ಸುನೀಲ್ ತರೀಕೆರೆ

